**ಅಸಲು ದಾವಾ ಸಂಖ್ಯೆ - 187/2012** **ಪಿ.ಡಬ್ಲ್ಯೂ:-2**

ದಿನಾಂಕಃ **20-06-2023** ರಂದು ಸಾಕ್ಷಿಯು ನ್ಯಾಯಾಲಯಕ್ಕೆ ಹಾಜರಾಗಿದ್ದು ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು :- ಪ್ರತಿವಾದಿ 1 ,6 ಮತ್ತು 7 ರವರ ಪರ ವಕೀಲರಿಂದ :-**

ನಾನು ಎಸ್ ಎಸ್ ಎಲ್ ಸಿ ವರೆಗೆ ವ್ಯಾಸಂಗ ಮಾಡಿರುತ್ತೇನೆ. ದಾವೆಯನ್ನು ನನ್ನ ತಾಯಿಯವರು ಹೂಡಿದ್ದರು. ನನ್ನ ತಾಯಿಯ ವಿವಾಹವು ಯಾವ ದಿನಾಂಕದಂದು ಆಯಿತು ಎಂಬುದು ನನಗೆ ಗೊತ್ತಿಲ್ಲ. ನಾನು ದಿಃ 15-05-1980 ರಂದು ಜನಿಸಿರುತ್ತೇನೆ. ನನ್ನ ತಾಯಿಗೆ ರತ್ನಾಬಾಯಿ, ಸರೋಜಬಾಯಿ, ವಿನೋದಬಾಯಿ, ಕುಮಾರನಾಯ್ಕು, ವೆಂಕಟೇಶ್ ನಾಯ್ಕು ಮತ್ತು ಸವಿತಾ ಎಂಬ ಆರು ಜನ ಮಕ್ಕಳು. ರಂಗನಾಯ್ಕು ನನ್ನ ತಂದೆ. ರತ್ನಾಬಾಯಿ ಮತ್ತು ವಿನೋದಬಾಯಿ ರವರನ್ನು ಈ ದಾವೆಯಲ್ಲಿ ಸೇರಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ ಎಂದರೆ ಸರಿ. ನನ್ನ ತಾಯಿಯ ತಂದೆಯ ಹೆಸರು ಹೇಮ್ಲಾನಾಯ್ಕು ಅವರ ತಾಯಿಯ ಹೆಸರು ನನಗೆ ಗೊತ್ತಿಲ್ಲ. ಹೇಮ್ಲಾನಾಯ್ಕು ತಂದೆಯ ಹೆಸರು ತೇಜ್ಯನಾಯ್ಕು. ಸದರಿಯವರಿಗೆ ಹೇಮ್ಲಾನಾಯ್ಕು ಮತ್ತು ಸಕ್ರಾನಾಯ್ಕು ಎಂಬ ಇಬ್ಬರು ಮಕ್ಕಳು. ಹೇಮ್ಲಾನಾಯ್ಕುರವರಿಗೆ ಬಸವಿಬಾಯಿ, ಸೋಮ್ಲಿಬಾಯಿ ಮತ್ತು ಹೀರಿಬಾಯಿ ಎಂಬ ಮೂರು ಜನ ಮಕ್ಕಳು. ಸಕ್ರಾನಾಯ್ಕುನಿಗೆ ಬಸವನಾಯ್ಕು, ಕಮಲಿಬಾಯಿ, ಕಾಳೀಬಾಯಿ, ಲಕ್ಷ್ಮೀಬಾಯಿ, ವೆಂಕೀಬಾಯಿ, ತೇಜ್ಯನಾಯ್ಕು ಮತ್ತು ಹನುಮಂತನಾಯ್ಕು ಎಂಬ ಏಳು ಜನ ಮಕ್ಕಳು. ಕಮಲಿಬಾಯಿ, ಕಾಳೀಬಾಯಿ, ಲಕ್ಷ್ಮೀಬಾಯಿ ಜೀವಂತವಾಗಿ ಇದ್ದಾರೆ. ಸದರಿಯವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ.

ನನ್ನ ಮುತ್ತಜನಾದ ತೇಜ್ಯನಾಯ್ಕು ರವರ ಜೀವಿತ ಕಾಲಾವಧಿಯಲ್ಲಿ ಅದಂತಹ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ನನ್ನ ಅಜ್ಜಂದಿರಾದ ಹೇಮ್ಲಾನಾಯ್ಕು ಮತ್ತು ಸಕ್ರ ನಾಯ್ಕು ರವರ ಜೀವಿತ ಕಾಲಾವಧಿಯಲ್ಲಿ ಅದಂತಹ ವ್ಯವಹಾರಗಳ ಬಗ್ಗೆ ನನಗೆ ಮಾಹಿತಿ ಇದೆ. ದಾವೆಯನ್ನು ಸಲ್ಲಿಸಲು ವಕೀಲರಿಗೆ ಮಾಹಿತಿಯನ್ನು ನಾನು

ನೀಡಿರುತ್ತೇನೆ. ದಾವಾ ಸ್ವತ್ತುಗಳ ದಾಖಲೆಗಳನ್ನು ಸಂಬಂಧಪಟ್ಟ ಕಚೇರಿಯಿಂದ ನಾನು ಪಡೆದುಕೊಂಡಿರುತ್ತೇನೆ. ನನಗೆ ಕನ್ನಡ ಓದಲು ಬರುತ್ತದೆ. 1958-59 ನೇ ಸಾಲಿನ ಪಹಣಿಯಲ್ಲಿ ನಮ್ಮ ತಾತಂದಿರಾದ ಹೇಮ್ಲಾನಾಯ್ಕ ಮತ್ತು ಸಕ್ರನಾಯ್ಕರವರ ಹೆಸರುಗಳಿಗೆ ಪ್ರತ್ಯೇಕವಾಗಿ ಜಮೀನುಗಳನ್ನು ನಮೂದು ಮಾಡಲಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಸದರಿ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳು ಎಂದು ಉತ್ತರಿಸುತ್ತಾರೆ. ಸಾಮಾನ್ಯವಾಗಿ ಒಟ್ಟು ಕುಟುಂಬದ ಸ್ವತ್ತುಗಳ ಖಾತೆಯು ಒಬ್ಬ ವ್ಯಕ್ತಿಯ ಹೆಸರಿನಲ್ಲಿ ಅಥವಾ ಜಂಟಿ ಹೆಸರಿನಲ್ಲಿ ಇರುತ್ತದೆ ಎಂದರೆ ಸರಿ. 1958-59 ರಿಂದ 1967-68 ನೇ ಸಾಲಿನ ಪಹಣಿ ಪತ್ರಿಕೆಗಳು ಖಾತೆದಾರರ ಹೆಸರುಗಳಲ್ಲಿ ಪ್ರತ್ಯೇಕವಾಗಿ, ಪ್ರತ್ಯೇಕ ವಿಸ್ತೀರ್ಣಗಳಲ್ಲಿ ದಾಖಲಾಗಿರುತ್ತದೆ ಎಂದರೆ ಸರಿ. ಸದರಿ ಪಹಣಿಗಳಲ್ಲಿ ವಿಭಾಗ, ಜಂಟೀ ಅಥವಾ ಪಿತ್ರಾರ್ಜಿತ ಎಂದು ನಮೂದು ಇರುವುದಿಲ್ಲ ಎಂದರೆ ಸರಿ .

ಸರ್ವೆ ನಂ. 47/2ರ ಸ್ವತ್ತು ಹೇಮ್ಲಾನಾಯ್ಕರವರಿಗೆ ಪಿತ್ರಾರ್ಜಿತವಾಗಿ ಬಂದಿರುತ್ತದೆ. ಸದರಿ ಸ್ವತ್ತನ್ನು ಹೇಮ್ಲಾನಾಯ್ಕರವರು ಸ್ವಂತ ಖರೀದಿ ಮಾಡಿರುತ್ತಾರೆ ಎಂದರೆ ಸರಿಯಲ್ಲ. ಸರ್ವೆ ನಂ. 47/2ರಲ್ಲಿ 5 ಎಕರೆ 25 ಗುಂಟೆ ಜಮೀನಿನ ಪೈಕಿ ಯಾರಿಗಾದರೂ ಜಮೀನು ಮಾರಾಟವಾಗಿರುವ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ . ಸರ್ವೆ ನಂ. 47/2ರಲ್ಲಿ 5 ಎಕರೆ 25 ಗುಂಟೆ ಜಮೀನಿನ ಪೈಕಿ 2 ಎಕರೆ 37 ½ ಗುಂಟೆ ಜಮೀನನ್ನು ಮಲ್ಲಪ್ಪ ಬಿನ್ ಬಸಪ್ಪರವರಿಗೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿಯಲ್ಲ. ನಂತರ ಸದರಿ ಸರ್ವೆ ನಂ. 47/2 ಎ ಮತ್ತು ಬಿ ಎಂದು ಪೋಡಿ ಆಗಿರುತ್ತದೆ ಎಂದರೆ ಸರಿ. ಸದರಿ ಪೋಡಿಯಂತೆ ಸರ್ವೆ ನಂ. 47/2 ಎ ಯಲ್ಲಿ 2 ಎಕರೆ 35 ಗುಂಟೆ ಜಮೀನು ಹೇಮ್ಲಾನಾಯ್ಕರವರ ಹೆಸರಿನಲ್ಲಿ ಪಹಣಿ ಪ್ರತ್ಯೇಕವಾಗಿ ಮುಂದುವರೆದಿರುತ್ತದೆ ಎಂದರೆ ಸರಿ . ಸಾಕ್ಷಿ ಮುಂದುವರೆದು ಒಟ್ಟು ಕುಟುಂಬದ ಸ್ವತ್ತನ್ನು ಮಲ್ಲಪ್ಪ ರವರಿಗೆ ಮಾರಾಟ ಮಾಡಲಾಗಿರುತ್ತದೆ ಎಂದು ಉತ್ತರಿಸುತ್ತಾರೆ. ಸದರಿ ವಿಚಾರ ನನಗೆ ನನ್ನ ತಾಯಿಯಿಂದ ಗೊತ್ತಾಗಿರುತ್ತದೆ.

ಮಲ್ಲಪ್ಪರವರ ಹೆಸರಿನಲ್ಲಿ ಸರ್ವೆ ನಂ. 47/2 ಬಿ ಸ್ವತ್ತಿನ ಪಹಣಿ ಪತ್ರಿಕೆಯು ಪ್ರತ್ಯೇಕವಾಗಿ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ 2 ರ ಸ್ವತ್ತಿನ ಪಹಣಿ ಪತ್ರಿಕೆಯು ಪ್ರಸುತ್ತ 6 ನೇ ಪ್ರತಿವಾದಿಯ ತೇಜನಾಯ್ಕರವರ ಹೆಸರಿನಲ್ಲಿ ಇದೆ. 6 ನೇ ಪ್ರತಿವಾದಿಗೆ ಸದರಿ ಸ್ವತ್ತು ಯಾವ ರೀತಿ ಬಂದಿರುತ್ತದೆ ಎಂಬುದು ನನಗೆ ಗೊತ್ತಿರುವುದಿಲ್ಲ. ದಿಃ 18-02-1976 ರಂದು 6 ನೇ ಪ್ರತಿವಾದಿಯ ತಂದೆ ಮಲ್ಲಪ್ಪರವರಿಂದ ದಾವಾ ಅನುಸೂಚಿ 2 ನೇ ಸ್ವತ್ತನ್ನು ಖರೀದಿಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಆ ಬಗ್ಗೆ ದಾಖಲೆಗಳನ್ನು ನೋಡಿರುವುದಿಲ್ಲ. ದಾವಾ ಅನುಸೂಚಿ 2 ನೇ ಸ್ವತ್ತಿನ ಪೂರ್ವಕ್ಕೆ ರಸ್ತೆ, ಪಶ್ಚಿಮಕ್ಕೆ ಇರುವ ಜಮೀನುದಾರರ ಹೆಸರು ನನಗೆ ಈಗ ನೆನಪಿಲ್ಲ. ದಾವಾ ಸ್ವತ್ತಿನ ಚೆಕ್ಕು ಬಂಧಿ ಸಂಪೂರ್ಣವಾಗಿ ಸುಳ್ಳಿನಿಂದ ಕೂಡಿದೆ ಎಂದರೆ ಸರಿಯಲ್ಲ. ದಾವಾ ಅನುಸೂಚಿ 2 ನೇ ಸ್ವತ್ತು 1985 ನೇ ಇಸವಿಯಲ್ಲಿ ಅದಂತಹ ವಿಭಾಗದಂತೆ ಬಸವನಾಯ್ಕು ರವರ ಹೆಸರಿಗೆ ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ.

ದಾವಾ ಅನುಸೂಚಿ 3 ನೇ ಸ್ವತ್ತಿನ ಪಹಣಿ ಯಾರ ಹೆಸರಿನಲ್ಲಿ ಇದೆ ಎಂಬುದು ನನಗೆ ಗೊತ್ತಿಲ್ಲ. ಅದರ ಚೆಕ್ಕು ಬಂಧಿಯು ಸಹ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ 3 ನೇ ಸ್ವತ್ತು ಸಕ್ರ ನಾಯ್ಕನ ಸ್ವಯಾರ್ಜಿತ ಸ್ವತ್ತು ಎಂದರೆ ಸರಿಯಲ್ಲ ಸದರಿ ಸ್ವತ್ತು ವಿಭಾಗದಲ್ಲಿ ಹನುಮಂತನಾಯ್ಕ ಮತ್ತು ತೇಜನಾಯ್ಕರವರ ಹಿಸ್ಸೆಗೆ ಹೋಗಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ 4 ನೇ ಸ್ವತ್ತಿನ ಪಹಣಿ ಯಾರ ಹೆಸರಿನಲ್ಲಿ ಇದೆ ಎಂಬುದು ನನಗೆ ಗೊತ್ತಿಲ್ಲ. ದಾವಾ ಅನುಸೂಚಿ 5 ನೇ ಸ್ವತ್ತಿನ ಪಹಣಿ ಯಾರ ಹೆಸರಿನಲ್ಲಿ ಇದೆ ಎಂಬುದು ನನಗೆ ಗೊತ್ತಿಲ್ಲ. ಅದರ ಚೆಕ್ಕು ಬಂಧಿಯು ಸಹ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ 6 ನೇ ಸ್ವತ್ತಿನ ಪಹಣಿ ಯಾರ ಹೆಸರಿನಲ್ಲಿ ಇದೆ ಎಂಬುದು ನನಗೆ ಗೊತ್ತಿಲ್ಲ. ಅದರ ಚೆಕ್ಕು ಬಂಧಿಯು ಸಹ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ 4 ರಿಂದ 6 ರ ಸ್ವತ್ತುಗಳು ಯಾವ ರೀತಿ ನಮಗೆ ಬಂದವು ಎಂಬುದು ನನಗೆ ಗೊತ್ತಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿಯು ಒಟ್ಟು ಕುಟುಂಬದ ಆಸ್ತಿಗಳಿಂದ ಬಂದಿರುತ್ತದೆ ಎಂದು ಉತ್ತರಿಸಿರುತ್ತಾರೆ. ದಾವಾ ಅನುಸೂಚಿ 4 ರಿಂದ 6 ರ ಸ್ವತ್ತುಗಳು ಒಟ್ಟು ಕುಟುಂಬದ ಸ್ವತ್ತುಗಳು ಎಂದು ತೋರಿಸಲು ಯಾವುದೇ ತೊಂದರೆ ಇಲ್ಲ. ದಾವಾ ಅನುಸೂಚಿ 7 ನೇ ಸ್ವತ್ತಿನ

ಖಾತೆದಾರರಿಗೆ ಸದರಿ ಸ್ವತ್ತು ಯಾವ ರೀತಿ ಬಂತು ಎಂಬುದು ನನಗೆ ಗೊತ್ತಿಲ್ಲ. ದಾವಾ ಅನುಸೂಚಿ 7 ನೇ ಸ್ವತ್ತು 1 ನೇ ಪ್ರತಿವಾದಿಗೆ ಮಂಜೂರಾದ ಸ್ವತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಅನುಸೂಚಿ 8 ನೇ ಸ್ವತ್ತು ಯಾರಿಗೆ, ಯಾವ ರೀತಿ ಬಂದಿರುತ್ತದೆ ಎಂಬುದು ನನಗೆ ಗೊತ್ತಿಲ್ಲ. ದಾವಾ ಅನುಸೂಚಿ 7 ಮತ್ತು 8 ರ ಸ್ವತ್ತಿನ ಚೆಕ್ಕು ಬಂಧಿಗಳ ಬಗ್ಗೆ ನನಗೆ ಮಾಹಿತಿ ಇರುವುದಿಲ್ಲ. ದಾವಾ ಅನುಸೂಚಿ 9 ನೇ ಸ್ವತ್ತು ಹನುಮಂತನಾಯ್ಕ ರವರಿಗೆ ಸೇರಿರಬಹುದು. ಸದರಿ ಸ್ವತ್ತಿನ ಚೆಕ್ಕು ಬಂಧಿಯನ್ನು ಹೇಳಲಾಗುವುದಿಲ್ಲ. ದಾವಾ ಅನುಸೂಚಿ 10 ಜನತಾ ಮನೆಯಾಗಿದ್ದು, ಅದರ ಖಾತೆಯು ಹೇಮ್ಲಾನಾಯ್ಕರವರ ಹೆಸರಿನಲ್ಲಿ ದಾಖಲಾಗಿದೆ. ಸದರಿ ಮನೆಯ ಖಾತೆಯು ಪ್ರಸುತ್ತ 1 ನೇ ಪ್ರತಿವಾದಿಯ ಮಗನಾದ ತೀರ್ಥನಾಯ್ಕರವರ ಹೆಸರಿನಲ್ಲಿ ಇದೆ. ತೀರ್ಥನಾಯ್ಕನ ಹೆಸರಿನಲ್ಲಿ ಖಾತೆಯನ್ನು ನಾನೇ ಮಾಡಿಸಿರುತ್ತೇನೆ. ಸದರಿ ಸ್ವತ್ತನ್ನು ನಾನು ತೀರ್ಥನಾಯ್ಕನಿಗೆ ಮಾರಾಟ ಮಾಡಿರುತ್ತೇನೆ. ಸದರಿ ಸ್ವತ್ತು ನನ್ನ ತಾಯಿಯಿಂದ ನನಗೆ ಬಂದಿರುತ್ತದೆ. ನನ್ನ ತಾಯಿಗೆ ಸದರಿ ಸ್ವತ್ತು ಅವರ ತಂದೆಯಿಂದ ಬಂದಿರುತ್ತದೆ. ಅದಕ್ಕೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇರುವುದಿಲ್ಲ. ತೀರ್ಥನಾಯ್ಕರವರನ್ನು ಈ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ದಾವಾ ಅನುಸೂಚಿ 11 ನೇ ಸ್ವತ್ತಿನ ಪ್ರಸುತ್ತ ಕಂದಾಯ ದಾಖಲೆಗಳು ತೀರ್ಥನಾಯ್ಕರವರ ಹೆಸರಿನಲ್ಲಿ ಇರಬಹುದು. ನನ್ನ ಚಿಕ್ಕಂದಿರಾದ ಸೋಮ್ಲಿಬಾಯಿ ಮತ್ತು ಹೀರಿಬಾಯಿರವರಿಂದ ಸದರಿ ಸ್ವತ್ತನ್ನು ತೀರ್ಥನಾಯ್ಕರವರು ಖರೀದಿಸಿರುತ್ತಾರೆ. ಸದರಿ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ .

ದಾವಾ ಅನುಸೂಚಿ 10 ನೇ ಸ್ವತ್ತಿನ ಪೂರ್ವಕ್ಕೆ ಹೇಮ್ಲಾನಾಯ್ಕ , ಪಶ್ಚಿಮಕ್ಕೆ ತೋಳಚನಾಯ್ಕ, ಉತ್ತರಕ್ಕೆ ಹಿತ್ತಲು ಜಮೀನು ಮತ್ತು ದಕ್ಷಿಣಕ್ಕೆ ರಸ್ತೆ ಇದೆ. ದಾವಾ ಅನುಸೂಚಿ 11 ನೇ ಸ್ವತ್ತಿನ ಪೂರ್ವಕ್ಕೆ ಹಾಲೀಬಾಯಿ, ಪಶ್ಚಿಮಕ್ಕೆ ತೇಜ್ಯನಾಯ್ಕ, ಉತ್ತರಕ್ಕೆ ಹಿತ್ತಲು ಮತ್ತು ಜಮೀನು ಮತ್ತು ದಕ್ಷಿಣಕ್ಕೆ ರಸ್ತೆ ಇದೆ. ನಾನು ದಾವಾ ಅನುಸೂಚಿ 10

ಮತ್ತು 11 ರ ಸ್ವತ್ತುಗಳಿಗೆ ತಿಳಿಸಿರುವ ಚೆಕ್ಕು ಬಂಧಿ ಪ್ರಸುತ್ತ ಅಸ್ತಿತ್ವದಲ್ಲಿ ಇರುವುದಿಲ್ಲ ಎಂದರೆ ಸರಿಯಲ್ಲ.

**ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.**

**ಸಾ. ಹೇ. ತೆ. ನ್ಯಾ ಬೆ. ಮಾಡಿಸಲಾಯಿತು.**

**ಓ. ಹೇ. ಕೇ. ಸ. ಇದೆ.**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ., ಹೊನ್ನಾಳಿ.**